ಕೆಲವು ಪ್ರಶ್ನೆಗಳಿಗೆ ಉತ್ತರವಿರುವುದಿಲ್ಲ. ಮೌನವಾಗಿ ಇತ್ತ ಬಂದರು. ಪಕ್ಕದೂರ ಯುವಕನೊಬ್ಬ ಎದುರಾದ. ಆತ ಆಗಾಗ ಪತ್ರಿಕೆಗಳಲ್ಲಿ ದೂರುಗಳನ್ನು ಬರೆಯುತ್ತಿದ್ದ. ಸಣ್ಣಪುಟ್ಟ ವೇದಿಕೆಗಳಲ್ಲಿ ಭಾಷಣ ಮಾಡುತ್ತಿದ್ದ.

'ಸೈನಿಕರನ್ನ ಯುದ್ಧಮಾಡೋಕೆ ಅಂತ ನೇಮಿಸಿರ್ತಾರೆ ಅಲ್ವ?' ಕೇಳಿದ.

'ಹೌದು... ಯಾಕೆ?'

'ಪರಶುರಾಮ ಯುದ್ಧಮಾಡತಾ ಸತ್ನಾ ?'

'ಇಲ್ಲಪ್ಪಾ, ಈಗ ಯುದ್ಧ ಎಲ್ಲಿ ನಡೀತಿದೆ? ನುಸುಳುಕೋರರನ್ನ ತಡೆಯುವಾಗ ಹುತಾತ್ಮನಾದ.'

'ಅದೇ ಮತ್ತೆ?... ಅಲ್ಲ... ಆದದ್ದು ವಿಷಾದನೀಯವೇ. ಆದರೆ ಯುದ್ಧದಲ್ಲಾದರೆ ಬೇರೆ ಸಂಗತಿ. ಇದಕ್ಕಷ್ಟು ಮಹತ್ವ ಯಾಕೆ ಅನಿಸಲ್ವ?'

ಸುಬೇದಾರರು ಭಾವೋದ್ವೇಗಕ್ಕೊಳಗಾದರು. ಯಾವ ಶಬ್ದ ಮೊದಲು ಉಚ್ಚರಿಸಬೇಕು ತಿಳಿಯದೆ ಕಂಪಿಸಿದರು. 'ಅಲ್ಲಪ್ಪಾ... ನಿನ್ನ ತೋಟಕ್ಕೆ ದನಗಳು ನುಗ್ಗಲಿಕ್ಕಾಗ್ದಂತೆ ಅಲ್ವ ನೀನು ಬೇಲಿ ಕಟ್ಟೋದು? ಆ ಬೇಲೀನೆ ಅಲ್ವ ನೀನು ಗಟ್ಟಿಬೇಲಿ ಅನ್ನಾದು?'

'ಹೌದು...'

'ಸೈನ್ಯ ಇರೋದು ಎರಡೂಕಡೆ ರಕ್ತ ಹರ್ಸಿ ಸುದ್ದಿ ಮಾಡೋಕಲ್ಲ. ಯುದ್ಧವಾಗದಂತೆ ತಡೆಯೋದ್ರಲ್ಲೆ ಅದರ ಸಾರ್ಥಕತೆ ಇರೋದು ಅಂತ ಅನಿಸಲ್ವ ನಿಂಗೆ?'

'ಅಲ್ಲ, ಪರಶುರಾಮ ಅವರೆ...'

'ಯಾವುದೇ ಸೈನಿಕನ ಮನೆಯೋರೂ ಯುದ್ಧ ಸಂದರ್ಭ ಬಂದಾಗ ತಮ್ಮ ಮಗ ಹೇಡಿಯಾಗ್ಲಿ ಅಂತಾ ಬಯಸೋದಿಲ್ಲ. ಅದರೆ ಅವರೆಲ್ಲ ಶಾಂತಿ ನೆಲಸಿರ್ಲಿ ಅಂತಲೇ ನಿತ್ಯ ದೇವರಲ್ಲಿ ಪ್ರಾರ್ಥಿಸೋದು. ಸೈನಿಕರ ಜೊತೆ ಅವರೂ ಬೇಲೀನೆ. ಪರಶುರಾಮನೂ ಗಡಿಯಲ್ಲಿ ಬೇಲಿಯಾಗಿದ್ದ...' ಇನ್ನು ಮಾತು ಬೇಡ ಅನಿಸತೊಡಗಿ ಸುಮ್ಮನಾದರು.

## ಬನವಾಸಿ ವೆಂಕಟೇಶ ದೀಕ್ಷಿತ್

ಬೆಂಗಳೂರಿನಲ್ಲಿ ನೆಲೆಸಿರುವ ಲೇಖಕರು ಸುಮಾರು 150ಕ್ಕೂ ಹೆಚ್ಚು ಕತೆಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಬಿ.ಎಸ್ಸಿ.ವರೆಗೆ ವಿದ್ಯಾಭ್ಯಾಸ. ಅಂಚೆ ಇಲಾಖೆಯಲ್ಲಿ ಕಲಬುರ್ಗಿಯಲ್ಲಿ, ವೃತ್ತಿಜೀವನದ ಆರಂಭ. ಅಲ್ಲಿಂದ ಭಾರತೀಯ ಸೇನೆ ಸೇರಿ, ವಾರಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡಾ, ಶ್ರೀನಗರ, ನಗ್ರೋಟ ಮತ್ತು ನವದೆಹಲಿ, ನಾಗಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸೇನೆಯ ಸೇವೆಯ ಬಳಿಕ ದೂರಸಂಪರ್ಕ ಇಲಾಖೆಯಲ್ಲಿ ಸೇವೆಗೆ ಸೇರಿ ಉಪಮಹಾಪ್ರಬಂಧಕರ ವೇತನಶ್ರೇಣಿಯಲ್ಲಿ ನಿವೃತ್ತರಾಗಿದ್ದಾರೆ. ಲೇಖಕರ ಪ್ರಕಟಿತ ಕಥಾ ಸಂಕಲನ 'ಕಾವಡಿ'.